MAG(3)NPP/210/202-22

ಉದಯಸೌರಭ

ಕನ್ನಡ ತ್ರೈಮಾಸಿಕ

UDAYASOURABHA

Kannada Quarterly

Volume - 1 ಸಂಪುಟ - 1 | December 2022 ಡಿಸೆಂಬರ್ 2022 | Page-12 ಪುಟ-12 | Rs.25 Annual ಬೆಲೆ.25 ವಾರ್ಷಿಕ | Issue - 3 ಸಂಚಿಕೆ - 3

Dr. Shantharaju, Editor – ಡಾ. ಶಾಂತರಾಜು, ಸಂಪಾದಕರು ❋ M. Narasimha, Publisher – ಎಂ. ನರಸಿಂಹ, ಪ್ರಕಾಶಕರು

ಸರ್ವರಿಗೂ ಹೊಸ ವರ್ಷದ ಹಾರ್ದಿಕ ಶುಭಾಶಯಗಳು

ಸುವರ್ಣ ಸಾಧನಾ ಪಥ

ವೀಕ್ಷಣೆ 02.10.2022

ಕರ್ನಾಟಕ ಘನ ಸರ್ಕಾರದ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಸವರಾಜ ಬೊಮ್ಮಾಯಿ ಅವರು ಸಂಘದ ಸುವರ್ಣ ಮಹೋತ್ಸವ ಸ್ಮಾರಕ ಭವನ ಉದ್ಘಾಟನಾ ನಂತರ ಆಗಮಿಸಿದ ಸಂದರ್ಭದಲ್ಲಿ ವಜ್ರ ಮಹೋತ್ಸವದೆಡೆಗೆ ಮುನ್ನಡೆಯುತ್ತಿರುವ ಸಂಘದ **ಸಾಧನಾ ಪಥ** ವೀಕ್ಷಿಸಿ ಸರ್ವಕಾಲಿಕ ಅಭಿವೃದ್ಧಿ ನಿಧಿ ಮತ್ತು ಸಿಗಬೇಕಾದ ಎಲ್ಲ ಸವಲತ್ತುಗಳನ್ನು ಒದಗಿಸಲು ಒಪ್ಪಿಗೆ ನೀಡಿದ ಸಂದರ್ಭ

ಚಿತ್ರದಲ್ಲಿ ಕರ್ನಾಟಕ ಘನ ಸರ್ಕಾರದ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಸವರಾಜ ಬೊಮ್ಮಾಯಿ, ಸನ್ಮಾನ್ಯ ಡಾ. ಉದಯ್ ಬಿ. ಗರುಡಾಚಾರ್, ಶಾಸಕರು, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ, ಸನ್ಮಾನ್ಯ ಶ್ರೀ ರವಿ ಸುಬ್ರಮಣ್ಯ, ಶಾಸಕರು, ಬಸನವಗುಡಿ ವಿಧಾನಸಭಾ ಕ್ಷೇತ್ರ, ಉದಯಭಾನು ಕಲಾಸಂಘದ ಅಧ್ಯಕ್ಷರಾದ ಶ್ರೀ ಶ್ರೀರಾಮೇಗೌಡ, ಉಪಾಧ್ಯಕ್ಷರಾದ ಶ್ರೀ ಟಿ. ಶ್ರೀನಿವಾಸ್, ಸಂಸ್ಥಾಪಕ ಕಾರ್ಯದರ್ಶಿಗಳಾದ ಶ್ರೀ ಎಂ. ನರಸಿಂಹ ಮತ್ತು ಸಹಾಯಕ ಕಾರ್ಯದರ್ಶಿ ಶ್ರೀ ಕೆ.ಎನ್. ಸೋಮಶೇಖರ್, ಕಾರ್ಯಾಧ್ಯಕ್ಷರಾದ ಡಾ. ಬಿ.ಎಸ್. ಸತ್ಯನಾರಾಯಣ ಇತರರು ಇದ್ದಾರೆ

06–10–2022 ವಿಜಯ ಕರ್ನಾಟಕ

ಸ್ಮಾರಕ ಭವನ ಕಟ್ಟಡ ವೀಕ್ಷಣೆ ಬಳಿಕ ಸಿಎಂ ಭರವಸೆ

ಉದಯಭಾನು ಕಲಾಸಂಘಕ್ಕೆ ಅಗತ್ಯ ಅನುದಾನ

04–10–2022 ಪ್ರಜಾವಾಣಿ

ಉದಯಭಾನು ಕಲಾ ಸಂಘಕ್ಕೆ ನೆರವು: ಸಿ.ಎಂ

ಆದರ್ಶ

ಸರಳತೆಯ ಸಾಕಾರಮೂರ್ತಿ, ಮೃದುಭಾಷಿ

ಡಾ. ಬೈರಮಂಗಲ ರಾಮೇಗೌಡ

ವಿದ್ಯಾರ್ಥಿಗಳ ನೆಚ್ಚಿನ ಮೇಷ್ಟ್ರು, ಸಾಹಿತಿ, ಸಂಘಟಕರು, ಕನ್ನಡ ಪರಚಿಂತಕರು, ವಿಮರ್ಶಕರು ಹಾಗೂ ವಾಗ್ಮಿಯೂ ಆಗಿ ಕನ್ನಡನಾಡಿನ ಉದ್ದಗಲಕ್ಕೂ ಚಿರಪರಿಚಿತರಾದ ರಾಮೇಗೌಡ ಅವರು ತಮ್ಮ ವಿಶಿಷ್ಟ ವ್ಯಕ್ತಿತ್ವದ ಮೂಲಕವೇ ಅವರ ಊರು ಬೈರಮಂಗಲಕ್ಕೆ ಹೆಸರು ತಂದವರು, ಬೈರಮಂಗಲ ರಾಮೇಗೌಡ ಎಂದೇ ಜನಪ್ರಿಯರಾದವರು. ಶ್ರೀಮತಿ ವೆಂಕಟಮ್ಮ ಮತ್ತು ಶ್ರೀ ಅಣ್ಣಯಪ್ಪ ಅವರ ಐದು ಜನ ಮಕ್ಕಳಲ್ಲಿ ಹಿರಿಯ ಮಗನಾಗಿ ಜೂನ್ 01, 1955ರಲ್ಲಿ ಈಗಿನ ರಾಮನಗರ ಜಿಲ್ಲೆಯ ಆಗ ಬೆಂಗಳೂರು ಜಿಲ್ಲೆ ಬೈರಮಂಗಲದಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣವನ್ನು ಬೈರಮಂಗಲದಲ್ಲಿ ಮಾಡಿ, ಪ್ರೌಢಶಾಲಾ ಶಿಕ್ಷಣವನ್ನು ಬಿಡದಿ ಬಸವೇಶ್ವರ ಸ್ವಾಮಿ ರೂರಲ್ ಹೈಸ್ಕೂಲಿನಲ್ಲಿ ಮುಗಿಸಿದರು. ಕಾಲೇಜು ಶಿಕ್ಷಣಕ್ಕಾಗಿ ಬೆಂಗಳೂರು ನಗರದ ಪ್ರತಿಷ್ಠಿತ ಸರ್ಕಾರಿ ಕಲಾ ಕಾಲೇಜನ್ನು ಸೇರಿ ಪದವಿ ಪೂರ್ವ ಶಿಕ್ಷಣ ಮತ್ತು ಬಿ.ಎ. ಪದವಿಯನ್ನು ಪಡೆದುಕೊಂಡರು. 1978ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಕನ್ನಡ ಸ್ನಾತಕೋತ್ತರ ಪಡೆದುಕೊಂಡು 'ಕುವೆಂಪು ಕಾವ್ಯ ಒಂದು ಅಧ್ಯಯನ' ಎಂಬ ವಿಷಯ ಕುರಿತು ಸಂಶೋಧನೆ ಮಾಡಿ ಮಹಾಪ್ರಬಂಧವನ್ನು ರಚಿಸಿ 1999ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿಯನ್ನು ಪಡೆದುಕೊಂಡು ಡಾ.ರಾಮೇಗೌಡ ಆದರು. ಸರಳತೆಯ ಸಾಕಾರಮೂರ್ತಿಯಾಗಿ, ಮೃದುಭಾಷಿಯಾಗಿ ಎಲ್ಲರನ್ನೂ ತನ್ನೆಡೆಗೆ ಸೆಳೆದುಕೊಳ್ಳುವ ವ್ಯಕ್ತಿತ್ವದ ಇವರು 35 ವರ್ಷಗಳ ದೀರ್ಘಾವಧಿಯ ಸೇವಾನುಭವವನ್ನು ಹೊಂದಿದ್ದಾರೆ. ರಾಜ್ಯಾದ್ಯಂತ ಹಲವು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಮತ್ತು ಸ್ನಾತಕೋತ್ತರ ಕೇಂದ್ರಗಳಲ್ಲಿ ಉಪನ್ಯಾಸಕರಾಗಿ, ಸಹಪ್ರಾಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ ವಿವಿಧ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸಿ ಯಾವ ಜಾತಿ ಧರ್ಮಗಳ ಗೊಡವೆಯನ್ನೂ ಅಂಟಿಸಿಕೊಳ್ಳದೆ, ವಿಶ್ವಮಾನವ ಧರ್ಮದ ಬೀಜಬಿತ್ತುವ ಕೆಲಸ ಮಾಡುತ್ತಾ ವಿದ್ಯಾರ್ಥಿಗಳಲ್ಲೂ ಅಂಥ ಅರಿವು ಮೂಡಿಸುತ್ತಾ, ಕುವೆಂಪು ಅವರ ವೈಚಾರಿಕೆ ಚಿಂತನೆಗಳನ್ನು, ಮನುಜಮತ ವಿಶ್ವಪಥ ದೃಷ್ಟಿಕೋನವನ್ನು ನೆಲೆಯೂರಿಸುತ್ತಾ ಜಾತ್ಯಾತೀತತೆ ಧರ್ಮನಿರಪೇಕ್ಷತೆಯ ಅಮೃತ ಸಿಂಚನವನ್ನು ಮಾಡಿಸಿ ವಿದ್ಯಾರ್ಥಿಗಳ ಮನಸ್ಸಿನಲ್ಲಿ ನೆಲೆ ನಿಂತರು. 2015ರಲ್ಲಿ ಸೇವಾ ನಿವೃತ್ತಿಯನ್ನು ಹೊಂದಿದರು. ವೃತ್ತಿಯಿಂದ ನಿವೃತ್ತರಾದರೂ ಪ್ರವೃತ್ತಿಯಿಂದ ಇನ್ನೂ ಹೆಚ್ಚಿನ ಜವಾಬ್ದಾರಿಗಳನ್ನು ನಿರ್ವಹಿಸುತ್ತಿರುವ ರಾಮೇಗೌಡರು ಬಹುಮುಖ ಪ್ರತಿಭೆಯುಳ್ಳವರು. ಹಾಗಾಗಿಯೇ ಮಠಮಾನ್ಯಗಳಿಂದ ಹಿಡಿದು ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ಯಿಕ ಸಂಸ್ಥೆಗಳವರೆಗೂ ನಿಕಟವಾದ ಸಂಪರ್ಕವನ್ನಿರಿಸಿಕೊಂಡು ಅವುಗಳ ಸರ್ವತೋಮುಖ ಬೆಳವಣಿಗೆಗೆ ತಮ್ಮಿಂದಾದ ಕೊಡುಗೆಯನ್ನು ನೀಡುತ್ತಾ ಬಂದಿದ್ದಾರೆ. ಕುವೆಂಪು ಸಾಹಿತ್ಯ ಪ್ರಚಾರವನ್ನು ಯುವಜನಾಂಗಕ್ಕೆ ಅಭಿಮಾನದಿಂದಲೇ ಮುಟ್ಟಿಸುತ್ತಾ ಸಾಗಿರುವ ಶ್ರೀಯುತರು ರಸಸಿದ್ಧಿ–ಕುವೆಂಪು ಸಾಹಿತ್ಯ ವಿಮರ್ಶೆ, ರಸಗ್ರಹಣ–ಕೃತಿ ವಿಮರ್ಶೆ, ರಸಲಹರಿ–ಸಾಹಿತ್ಯ ವಿಮರ್ಶೆ, ರಸಯಾನ–ಸಾಹಿತ್ಯ ವಿಮರ್ಶೆ ಎಂಬ ವಿಮರ್ಶಾ ಕೃತಿಗಳನ್ನು, ಸಿಂಧೂರಿ ಎಂಬ ಕಥಾಸಂಕಲನವನ್ನೂ, ಮಾಯಾಕಿನ್ನರಿ ಎಂಬ ಕಾದಂಬರಿಯನ್ನೂ, ಕೆಂಗಲ್ ಹನುಮಂತಯ್ಯ, ಹಡಪದ ಅಪ್ಪಣ ಎಂಬೆರಡು ವ್ಯಕ್ತಿಚಿತ್ರಗಳ ಜತೆಗೆ ಈ ಪರಿಯಸೊಬಗು, ಜನಪದ ಗೀತೆಗಳು, ಜಾನಪದ ದರ್ಶನ –ಜಾನಪದ ಪರಿಚಯ ಗ್ರಂಥ, ಜಗತ್ತಿನ ಜನಪದ ಕಥೆಗಳು–ಅನುವಾದ ಕೃತಿಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ಕನ್ನಡದ ಪ್ರಮುಖ ಪತ್ರಿಕೆಗಳಾದ ಸಂಯುಕ್ತ ಕರ್ನಾಟಕ, ಪ್ರಜಾವಾಣಿ, ಉದಯವಾಣಿ, ವಿಜಯ ಕರ್ನಾಟಕ, ಸಿಹಿಗಾಳಿ, ಆಭರಣ ಸುದ್ದಿ ಪತ್ರಿಕೆಗಳಲ್ಲಿ ಕಥೆ, ಕವಿತೆ, ವಿಮರ್ಶೆ, ಅಂಕಣಬರಹಗಳನ್ನು ಬರೆಯುತ್ತಿರುವ ಇವರು ಆಕಾಶವಾಣಿ, ದೂರದರ್ಶನ ಕಾರ್ಯಕ್ರಮಗಳಲ್ಲಿ, ರಾಜ್ಯ ಮತ್ತು ರಾಷ್ಟ್ರಮಟ್ಟದ ವಿಚಾರ ಸಂಕಿರಣಗಳಲ್ಲಿ, ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಹಾಗೂ ಅಖಿಲ ಭಾರತ ಸಾಹಿತ್ಯ ಸಮ್ಮೇಳನಗಳಲ್ಲಿ ಉಪನ್ಯಾಸ, ಸಂವಾದ, ಪ್ರಬಂಧ ಮಂಡನೆ, ಭಾಷಣ ಮಾಡಿದ್ದಾರೆ. ಕಳೆದ 38 ವರ್ಷಗಳಲ್ಲಿ ಸುಮಾರು 2000ಕ್ಕೂ ಮೀರಿ ಉಪನ್ಯಾಸ, ಭಾಷಣಗಳನ್ನು ವಿವಿಧ ವಿಚಾರ ಸಂಕಿರಣ ಮತ್ತು ಸಾರ್ವಜನಿಕ ವೇದಿಕೆಗಳಲ್ಲಿ ಮಾಡಿ ಜನಮಾನಸದಲ್ಲಿ ಚಿರಸ್ಥಾಯಿಯಾಗಿ ಉಳಿದಿದ್ದಾರೆ.

ಗ್ರಂಥ ಸಂಪಾದನಾ ಕ್ಷೇತ್ರದಲ್ಲಿ ವಿಶಿಷ್ಟ ಛಾಪು ಮೂಡಿಸಿರುವ ರಾಮೇಗೌಡರು 83ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ವಿಚಾರಗೋಷ್ಠಿಗಳ ಲೇಖನಗಳನ್ನು 'ನುಡಿಗಂಧ' ಶೀರ್ಷಿಕೆಯಡಿಯಲ್ಲಿ, 42ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ವಿಚಾರಗೋಷ್ಠಿಗಳ ಲೇಖನಗಳನ್ನು 'ರಾಯಶಕ್ತಿ' ಶೀರ್ಷಿಕೆಯಲ್ಲಿ, ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟಣೆಗಾಗಿ ಸಂಪಾದಿಸಿದ್ದಾರೆ. ದೆಹಲಿಯಲ್ಲಿ ನಡೆದ ಹೊರನಾಡಿನ ಕನ್ನಡಿಗರ ಪ್ರಥಮ ರಾಷ್ಟ್ರೀಯ ಸಮಾವೇಶದಲ್ಲಿನ ಲೇಖನಗಳನ್ನು 'ಸಮಾಲೋಕ' ಎಂಬ ಶೀರ್ಷಿಕೆಯಲ್ಲಿ ಸಂಪಾದಿಸಿದ್ದಾರೆ. ಬಿ.ಎಲ್. ಲಕ್ಕೇಗೌಡರ ಜೀವನ–ಸಾಧನೆಯನ್ನು ಕುರಿತ ಅಭಿನಂದನಾ ಗ್ರಂಥ 'ಕರ್ಮಯೋಗಿ', ಬೆಂಗಳೂರು ನಗರ ಜಿಲ್ಲಾ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣ ಸಂಚಿಕೆ 'ರಾಜಧಾನಿ', ಬೆಂಗಳೂರು ಜಿಲ್ಲಾ 5ನೇ ಸಾಹಿತ್ಯ ಸಮ್ಮೇಳನದ ಸ್ಮರಣ ಸಂಚಿಕೆ 'ಮಾಯಾನಗರಿ', ಅಖಿಲ ಭಾರತ 77ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣ ಸಂಚಿಕೆ 'ಬಾಗಿನ' ಮತ್ತು ಲೇಖನಗಳ ಸಂಪುಟ 'ಬೆಂಗಳೂರು ಬೆಡಗು', ಕನ್ನಡ ಸಾಹಿತ್ಯ ಪರಿಷತ್ತಿನ ಕಥಾ ಸಂಚಯ 'ವರ್ತಮಾನ ಕಥೆಗಳು', 'ಕನ್ನಡ ಸಾಹಿತ್ಯ ಸಂಗಮ' ಎಂಬ ಕನ್ನಡ ಸಾಹಿತ್ಯ ಪರಿಷತ್ತಿನ ಕಾವ ವಿದ್ಯಾರ್ಥಿಗಳಿಗಾಗಿ ಪಠ್ಯಪುಸ್ತಕ, ಕರ್ನಾಟಕ ವಸತಿ ಮಹಾ ಮಂಡಳಿಯ ವಜ್ರ ಮಹೋತ್ಸವ ಸ್ಮರಣಸಂಚಿಕೆ 'ವಜ್ರಕಿರಣ', ಪುಂಡಲೀಕ ಹಾಲಂಬಿಯವರ ಅಭಿನಂದನಾ ಗ್ರಂಥ 'ಕನ್ನಡ ಸಿರಿ', ಶ್ರೀರಂಗನಾಥ ಬುಕ್‌ಸ್ಟಾಲ್ ಪ್ರಕಟಣೆಯ ಕಥಾಸಂಕಲನ 'ಕನವರಿಕೆಗಳು', ಸಿ.ವಿ.ಜಿ. ಇಂಡಿಯಾ ಪ್ರಕಾಶನದಿಂದ 2012ರಲ್ಲಿ ಕುವೆಂಪು ಅವರ 108ನೇ ಜನ್ಮದಿನಕ್ಕೆ 108 ಪುಸ್ತಕಗಳು ಹಾಗೂ ಸಿವಿಜಿ ಪಬ್ಲಿಕೇಷನ್ಸ್‌ನ 2020ರಲ್ಲಿ ಬೆಳ್ಳಿಹಬ್ಬದ ನೆನಪಿಗೆ ಕುವೆಂಪು ಅವರನ್ನು ಕುರಿತು 25 ಕೃತಿಗಳನ್ನು ಸಂಪಾದಿಸುವುದರ ಮೂಲಕ ಸಂಪಾದಕರಾಗಿ ಮನ್ನಣೆಗಳಿಸಿಕೊಂಡಿದ್ದಾರೆ.

ಮಕ್ಕಳಿಗಾಗಿ ಯೇಸುಕ್ರಿಸ್ತ, ಮಹಾತ್ಮಗಾಂಧಿ, ಬುದ್ಧ, ಸ್ವಾಮಿ ವಿವೇಕಾನಂದ, ಮದರ್ ತೆರೇಸಾ, ನೆಲ್ಸನ್ ಮಂಡೇಲಾ, ದಲೈಲಾಮ, ಅಲೆಗ್ಸಾಂಡರ್ ಮಹಾಶಯ, ಟಿಪ್ಪುಸುಲ್ತಾನ್, ಮುಹಮ್ಮದ್ ಅಲಿ, ಜೆ.ಆರ್.ಡಿ. ಟಾಟಾ, ಹೆನ್ರಿಫೋರ್ಡ್, ವಾಲ್ಟ್‌ಡಿಸ್ನಿ, ಚಾರ್ಲಿಚಾಪ್ಲಿನ್, ಪೀಲೆ, ಅಡಾಲ್ಫ್ ಹಿಟ್ಲರ್, ಚೆಂಗೀಸ್‌ಖಾನ್, ತೆನಾಲಿರಾಮ ಮುಂತಾದ ಪರಿಚಯತ್ಮಾಕ ಕೃತಿಗಳನ್ನು ಸರಳವಾಗಿ ರಚಿಸಿದ್ದಾರೆ. ತೆನಾಲಿರಾಮ– ಜನಪ್ರಿಯ ಕತೆಗಳು, ತೆನಾಲಿರಾಮ–ಪ್ರಸಿದ್ಧಕತೆಗಳು, ತೆನಾಲಿರಾಮ ಆಯ್ದ ಕತೆಗಳು, ತೆನಾಲಿರಾಮ–ಮೆಚ್ಚಿನ ಕತೆಗಳು, ಮುಲ್ಲಾ ನಸ್ರುದ್ದೀನ್– ಮುಲ್ಲಾ ನಸ್ರುದ್ದೀನ್– ಆಯ್ದ ಕತೆಗಳು, ಮುಲ್ಲಾ ನಸ್ರುದ್ದೀನ್ ಜನಪ್ರಿಯ ಕತೆಗಳು ಹಾಗು ಮುಲ್ಲಾ ನಸ್ರುದ್ದೀನ್ ಪ್ರಸಿದ್ಧ ಕತೆಗಳು ಎಂಬ ಕೃತಿಗಳನ್ನು ರಚಿಸಿದ್ದಾರೆ.

1994ರಲ್ಲಿ ಮಂಡ್ಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕವಿತೆ ವಾಚನ ಮಾಡಿದ ಇವರು, ಮೈಸೂರು ದಸರಾ ಕವಿಗೋಷ್ಠಿಯಲ್ಲಿ, ಕವನ ವಾಚನ ಮಾಡಿ ಕವಿಯಾಗಿಯೂ ಹೆಸರು ಮಾಡಿದರಾದರೂ ಕವನ ಸಂಕಲನ ಪ್ರಕಟಿಸಲು ಈಗ ಮನಸ್ಸು ಮಾಡಿದ್ದಾರೆ. ಬೆಂಗಳೂರು ಆಕಾಶವಾಣಿಯ ಜನಪದ ಕಲಾವಿದರ ಆಯ್ಕೆ ಸಮಿತಿ ಸದಸ್ಯರಾಗಿ, ಬುದ್ಧ–ಬಸವ–ಗಾಂಧಿ ಸಾಂಸ್ಕೃತಿಕ ಟ್ರಸ್ಟಿನ ರಾಜ್ಯ ಮಟ್ಟದ ಕನ್ನಡ ಕಾವ್ಯ ಸಂಸ್ಕೃತಿ ಶಿಬಿರದ ನಿರ್ದೇಶಕರಾಗಿ, ಬೆಂಗಳೂರು ವಿಶ್ವವಿದ್ಯಾಲಯದ ಕಾಲೇಜು ಕನ್ನಡ ಅಧ್ಯಾಪಕರ ಒಕ್ಕೂಟದ ಅಧ್ಯಕ್ಷರಾಗಿ, ರಾಜಾರಾಂ ಮೋಹನ್‌ರಾಯ್ ಗ್ರಂಥಾಲಯ ಪ್ರತಿಷ್ಠಾನದ ರಾಜ್ಯ ಗ್ರಂಥಾಲಯ ಸಮಿತಿ ಪ್ರತಿನಿಧಿಯಾಗಿ, ಸಾರ್ವಜನಿಕ ಗ್ರಂಥಾಲಯ ಇಲಾಖೆ ಸಗಟು ಪುಸ್ತಕ ಖರೀದಿ ಆಯ್ಕೆ ಸಮಿತಿಯ ಸದಸ್ಯರಾಗಿ, ಬೆಂಗಳೂರು ಜಿಲ್ಲಾ ಗೆಜೆಟಿಯರ್ ಸಮಿತಿ ಸದಸ್ಯರಾಗಿ, ಸಮಾನ ಮನಸ್ಕರ ಒಕ್ಕೂಟದ ಕಾರ್ಯದರ್ಶಿಯಾಗಿ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಅರ್ಧ ವಾರ್ಷಿಕ ಸಂಚಿಕೆ 'ಜನಪದಜಗಲಿ' ಗೌರವ ಸಂಪಾದಕರಾಗಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ 'ವಾರ್ತಾಪತ್ರ'ದ ಸಂಪಾದಕರಾಗಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿ, ಬಿ.ಎಂ.ಶ್ರೀ. ಪ್ರತಿಷ್ಠಾನದ ಕಾರ್ಯಕಾರಿ ಸಮಿತಿ ಸದಸ್ಯರಾಗಿ, ಭಾರತ್ ಗೃಹ ನಿರ್ಮಾಣ ಸಹಕಾರ ಸಂಘದ ನಿರ್ದೇಶಕರಾಗಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಕಾವ್ಯ ಕಮ್ಮಟ ಮತ್ತು ಲಲಿತ ಪ್ರಬಂಧ ಕಮ್ಮಟಗಳ ನಿರ್ದೇಶಕರಾಗಿ ಸೇವೆ ಸಲ್ಲಿಸಿರುವ ಇವರು ಪ್ರಸ್ತುತ ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷರಾಗಿ ಮತ್ತು ಭಾರತ್ ಶಿಕ್ಷಣ ಸಂಸ್ಥೆಗಳ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. 2019ರಲ್ಲಿ ಅಂತಾರಾಷ್ಟ್ರೀಯ ಸಾಂಸ್ಕೃತಿಕ ಉತ್ಸವದಲ್ಲಿ ಪಾಲ್ಗೊಳ್ಳುವ ಸಲುವಾಗಿ ಭೂತಾನ್‌ಗೆ ಪ್ರಯಾಣ ಮಾಡಿದ್ದಷ್ಟೇ ಅಲ್ಲದೆ ಕನ್ನಡ ಸಾಹಿತ್ಯ ಪರಿಷತ್ತು ಆಯೋಜಿಸಿದ್ದ ಅಂತಾರಾಷ್ಟ್ರೀಯ ಕನ್ನಡ ಸಾಹಿತ್ಯ ಸಮ್ಮೇಳನದ ವಿಚಾರಗೋಷ್ಠಿಯಲ್ಲಿ ವಿಷಯ ಮಂಡಿಸಲು ಅರೇಬಿಯಾ ಒಕ್ಕೂಟರಾಷ್ಟ್ರ ಬಹರೇನ್‌ಗೆ 2018ರಲ್ಲಿ ಹೋಗಿ ತಮ್ಮ ಸಾಹಿತ್ಯದ ಅನುಭವವನ್ನು ಹಂಚಿಕೊಂಡಿದ್ದಾರೆ.

ಡಾ. ಬೈರಮಂಗಲ ರಾಮೇಗೌಡರು ಸಲ್ಲಿಸಿರುವ ಸೇವೆಯನ್ನು ಮನಗಂಡು ಸರ್ಕಾರ ಹಾಗೂ ಪ್ರತಿಷ್ಠಿತ ಸಂಘ–ಸಂಸ್ಥೆಗಳು ಪ್ರಶಸ್ತಿ ಪುರಸ್ಕಾರವನ್ನು ನೀಡಿ, ಸನ್ಮಾನಿಸಿ ಗೌರವಿಸಿವೆ. ಅವುಗಳಲ್ಲಿ ಕೆಲವನ್ನು ಉಲ್ಲೇಖಿಸುವುದಾದರೆ ಕರ್ನಾಟಕ ವಾಟರ್ ರಿಸೋರ್ಸಸ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್ ಕೌನ್ಸಿಲ್ ನೀಡುವ 'ಭೀಷ್ಮ' ಬಿರುದು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ರಾಮನಗರ ವಿಭಾಗದ ಕನ್ನಡ ಕ್ರಿಯಾ ಸಮಿತಿಯಿಂದ 'ಸಾಹಿತ್ಯ ಕೌಸ್ತುಭ', ರಾಮನಗರ ಜಿಲ್ಲೆ 2ನೇ ಕನ್ನಡ ಸಾಹಿತ್ಯ ಸಮ್ಮೇಳದ ಅಧ್ಯಕ್ಷತೆಯ ಗೌರವ, ಬೆಂಗಳೂರಿನ ಕುವೆಂಪು ಆದರ್ಶ ಗೆಳೆಯರ ಬಳಗದ 'ಸಾಹಿತ್ಯರತ್ನ ಪ್ರಶಸ್ತಿ', ಮೈಸೂರಿನ ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಮತ್ತು ದೇಜಗೌ ಟ್ರಸ್ಟ್‌ನ 'ವಿಶ್ವಮಾನವ ಪ್ರಶಸ್ತಿ', ಚಿತ್ರದುರ್ಗದ ಮುರುಘಾ ಮಠದ 'ಮುರುಘಾಶ್ರೀ ಪ್ರಶಸ್ತಿ', ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 'ನಾಡಪ್ರಭು ಕೆಂಪೇಗೌಡ ಪ್ರಶಸ್ತಿ', 'ಬೆಂಗಳೂರು ರತ್ನ' ಪತ್ರಿಕೆಯ 'ಬೆಂಗಳೂರು ರತ್ನ ಪ್ರಶಸ್ತಿ' 60ನೇ ಅಖಿಲ ಭಾರತ ಸಹಕಾರ ಸಪ್ತಾಹದಲ್ಲಿ ಶಿಕ್ಷಣ ಕ್ಷೇತ್ರದಲ್ಲಿನ ಅತ್ಯುತ್ತಮ ಸೇವೆಗಾಗಿ ಪ್ರಶಸ್ತಿ, ಭಾರತೀ ಕೋ–ಆಪರೇಟಿವ್ ಕ್ರೆಡಿಟ್ ಸೊಸೈಟಿಯ 'ಸಹಕಾರರತ್ನ ಬಿ.ಎಲ್. ಲಕ್ಕೇಗೌಡ ಪ್ರಶಸ್ತಿ', ಕರ್ನಾಟಕ ಸಾಂಸ್ಕೃತಿಕ ಅಕಾಡೆಮಿಯಿಂದ ಮೊದಲ 'ಕರ್ನಾಟಕ ರತ್ನಶ್ರೀ ಪ್ರಶಸ್ತಿ', ನವಭಾರತ ಉದಯ ಪ್ರತಿಷ್ಠಾನದಿಂದ' ಕನ್ನಡ ಡಿಂಡಿಮ ಪ್ರಶಸ್ತಿ', ಅಕ್ಷರ ಐಸಿರಿಯ 'ವರ್ಷದ ವ್ಯಕ್ತಿ ಪ್ರಶಸ್ತಿ', ಹೆಚ್.ಎ.ಎಲ್.ನ 'ರಾಜ್ಯೋತ್ಸವ ಪ್ರಶಸ್ತಿ', ನಿಸರ್ಗ ಟ್ರಸ್ಟ್ ಅಂಕನಹಳ್ಳಿ ಜಿ.ಪಿ. ರಾಜರತ್ನಂ ಸ್ಮರಣಾರ್ಥ 'ರಾಮನಗರರತ್ನ ಪ್ರಶಸ್ತಿ', ಕನ್ನಡ ಸೇನಾನಿ ಜಿ. ನಾರಾಯಣಕುಮಾರ್ ಹೆಸರಿನ 'ಜಿ.ನಾ.ಕು. ಪ್ರಶಸ್ತಿ', ಮೈಸೂರಿನ ಬಾಲಸಾಹಿತ್ಯ ಚಿಂತನ ಬಳಗದಿಂದ 'ಕರ್ನಾಟಕ ಸಾಹಿತ್ಯ ಶಿರೋಮಣಿ ಪ್ರಶಸ್ತಿ', ಕನ್ನಡ ಸಾಹಿತ್ಯ ಪರಿಷತ್ತಿನ ಕುವೆಂಪು 'ಸಿರಿಗನ್ನಡ ಪ್ರಶಸ್ತಿ', ಕರ್ನಾಟಕ ಕುವೆಂಪು ಸಾಂಸ್ಕೃತಿಕ ವೇದಿಕೆಯ ವಿಶ್ವಚೇತನ ಪ್ರಶಸ್ತಿ, ಅಖಿಲ ಕರ್ನಾಟಕ ವಿಚಾರವಾದಿ ಕರ್ನಾಟಕ 'ಮಹಾವಿಚಾರರನ್ನ ಪ್ರಶಸ್ತಿ' ಶ್ರವಣಬೆಳಗೊಳದಲ್ಲಿ ನಡೆದ 81ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ನಾಡು ನುಡಿ ಸೇವೆಗಾಗಿ ಸನ್ಮಾನ ಗೌರವ ಪಡೆದಿರುವ ಇವರು ಎಷ್ಟೇ ಗೌರವ ಸನ್ಮಾನಗಳಿಗೆ ಪಾತ್ರರಾಗಿದ್ದರೂ ಬೀಗದೆ ಸರಳರಾಗಿ, ಸಜ್ಜನರಾಗಿ, ಜನಾನುರಾಗಿಯಾಗಿ, ಆದರ್ಶಪ್ರಾಯರಾಗಿ ನಮ್ಮೊಡನಿರುವುದು ಹೆಮ್ಮೆಯ ವಿಚಾರವಾಗಿದೆ. ❑

ಆದರ್ಶ

ಮರೆಯಲಾಗದ ಮಹಾನುಭಾವ

ನಾಡೋಜ ಡಾ. ಜಿ. ನಾರಾಯಣ

ಕನ್ನಡ ದೇಶಭಕ್ತರೂ, ಪತ್ರಿಕಾ ಸಂಪಾದಕರೂ, ಹಿರಿಯ ಗಾಂಧಿ ಅನುಯಾಯಿಗಳು, ಸಂಘಟಕರೂ ಹಾಗೂ ಕಾಂಗ್ರೆಸ್ ನಾಯಕರೂ ಆದ ಗಿರೀಗೌಡ ನಾರಾಯಣ ಅವರು ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನ ದೇಶಹಳ್ಳಿಯಲ್ಲಿ 02-09-1923ರಲ್ಲಿ ಶ್ರೀ ಗಿರೀಗೌಡ ಮತ್ತು ಶ್ರೀಮತಿ ಸಣ್ಣಮ್ಮ ಎಂಬ ದಂಪತಿಗಳಿಗೆ ಮಗನಾಗಿ ಜನ್ಮವೆತ್ತಿದರು. ಪ್ರೌಢಶಾಲೆಯ ವಿದ್ಯಾಭ್ಯಾಸ ಮಾಡುತ್ತಿದ್ದಾಗಲೇ ಶಿವಪುರದಲ್ಲಿ ನಡೆದ ಮೈಸೂರು ಕಾಂಗ್ರೆಸ್ ಅಧಿವೇಶನದಲ್ಲಿ ಸ್ವಯಂಸೇವಕರಾಗಿ ಭಾಗವಹಿಸಿದರು, ವಿದ್ಯೆಗೆ ವಿದಾಯ ಹೇಳಿ ಸ್ವಾತಂತ್ರ್ಯ ಚಳುವಳಿಗೆ ದುಮುಕಿದರು. 1942ರಲ್ಲಿ ನಡೆದ 'ಭಾರತಬಿಟ್ಟು ತೊಲಗಿ' ಚಳುವಳಿಯಲ್ಲಿ ಪಾಲ್ಗೊಂಡು ಬೆಳಗಾವಿಯ ಹಿಂದಲಗಾ ಜೈಲಿನಲ್ಲಿ ಸೆರೆವಾಸವನ್ನು ಅನುಭವಿಸಿದರು. ಮೂರು ತಿಂಗಳು ಸೆರೆವಾಸ ಅನುಭವಿಸಿ ವಾಪಸ್ಸಾದ ಮೇಲೆ ಸ್ವಗ್ರಾಮದಲ್ಲಿ ಗ್ರಾಮೀಣ ಅಭಿವೃದ್ಧಿ ಮತ್ತು ಸಾಕ್ಷರತಾ ಆಂದೋಲನದಲ್ಲಿ ಪಾಲ್ಗೊಂಡರು. ಎಚ್.ಕೆ. ವೀರಣಗೌಡರ ಮಾತಿಗೆ ಒಪ್ಪಿ ಕಾಂಗ್ರೆಸ್ ಪಕ್ಷಕ್ಕೆ ಪ್ರವೇಶ ಮಾಡಿದ ಇವರು ಪಕ್ಷದ ವಾರ್ತಾಪತ್ರಗಳಾದ ವಾರ್ತಾ ಮತ್ತು ಚಿತ್ರಗುಪ್ತ ಪತ್ರಿಗೆಗಳ ವ್ಯವಸ್ಥಾಪಕರಾಗಿ ಪತ್ರಿಕೋದ್ಯಮಕ್ಕೆ ಕಾಲಿಟ್ಟರು. 1950ರಲ್ಲಿ ಚಾಮರಾಜಪೇಟೆಯಲ್ಲಿ ತಮ್ಮದೇ ಮುದ್ರಣಾಲಯವನ್ನು ಆರಂಭಿಸಿ ವಿನೋದ ಮಾಸ ಪತ್ರಿಕೆಯನ್ನು ಸಂಪಾದಿಸಿ ಪ್ರಕಟಿಸುವುದರ ಮೂಲಕ ಹಾಸ್ಯಕ್ಕೆ ಮೀಸಲಾದ ಪ್ರಧಾನ ಪತ್ರಿಕೆ ಎಂಬ ಖ್ಯಾತಿಯನ್ನು ಪಡೆದರು. ನಿರ್ವಿವಾದ ಪತ್ರಿಕೆಯನ್ನು ಸಂಪಾದಿಸಿ 61 ವರ್ಷಕಾಲ ನಡೆಸಿದರು.

1957ರಲ್ಲಿ ಬೆಂಗಳೂರು ನಗರ ಪಾಲಿಕೆಯ ಸದಸ್ಯರಾಗಿ 1964ರಲ್ಲಿ ಮಹಾಪೌರರಾಗಿ ಚುನಾಯಿತರಾದರು. ಮಹಾನಗರ ಪಾಲಿಕೆಯ ವತಿಯಿಂದ ಶಾಲಾ-ಕಾಲೇಜುಗಳನ್ನು ಆರಂಭಿಸಿದರು, ಆಸ್ಪತ್ರೆಗಳನ್ನು ನವೀಕರಣ ಮಾಡಿದರು, ಬೆಂಗಳೂರಿನ ರಸ್ತೆಗಳನ್ನು ಸಂಚಾರಯೋಗ್ಯವಾಗಿಸಿದರು. ಮಹಾನಗರಕ್ಕೆ ಕುಡಿಯುವ ನೀರನ್ನು ಒದಗಿಸಲು ಕಾವೇರಿ ಪ್ರಥಮ ಹಂತದ ಯೋಜನೆಯನ್ನು ರೂಪಿಸಿದರು. ಕಾರ್ಯಪ್ರವೃತ್ತರಾಗಿ ಕೇಂದ್ರ ಸಚಿವರಾದ ಲಾಲ್ ಬಹದ್ದೂರ್ ಶಾಸ್ತ್ರಿ ಮತ್ತು ರಾಷ್ಟ್ರೀಯ ಕಾಂಗ್ರೆಸ್‌ನ ಅಧ್ಯಕ್ಷರಾದ ಕಾಮರಾಜ ನಾಡಾರ್ ಅವರನ್ನು ಬರಮಾಡಿಕೊಂಡು ಶಂಕುಸ್ಥಾಪನೆ ನೆರವೇರಿಸಿದರು. ಆ ಮೂಲಕ ಬೆಂಗಳೂರಿಗೆ ಕಾವೇರಿ ನೀರನ್ನು ಮೊದಲು ಹರಿಸಿದ ಸಾಧಕ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಮಹಾನಗರ ಪಾಲಿಕೆಯ ಮುಂಭಾಗದಲ್ಲಿ ನಾಡ ನಿರ್ಮಾಪಕ ಕೆಂಪೇಗೌಡರ ಕಂಚಿನ ಪ್ರತಿಮೆಯನ್ನು ಸ್ಥಾಪಿಸಿದರು. ಆದರೆ ಸಕ್ರಿಯ ರಾಜಕಾರಣದಿಂದ ದೂರವಿದ್ದು ಮೌಲ್ಯಾಧಾರಿತ ಗುಣಗಳಿಂದ ರಾಜಕಾರಣಿಗಳಿಗೆ ಆದರ್ಶಪ್ರಾಯರಾದ ಮಾರ್ಗದರ್ಶಕರಾದರು.

ಯಾವುದೇ ಕುರ್ಚಿಗೆ ಅಂಟಿಕೊಂಡು ಕೂರದ ಇವರು ತಾವು ಕುಳಿತ ಕುರ್ಚಿಗೆ ಎಂದೂ ಕಳಂಕತಂದವರಲ್ಲ. ನಾಡಿನಾದ್ಯಂತ ಗೌರವ ಸಂಪಾದಿಸಿದ ಇವರು ಎಂದೂ ಸರ್ಕಾರಿ ಹಣಕಾಸನ್ನು ದುಂದುವೆಚ್ಚ ಮಾಡಿದವರಲ್ಲ ಆದ್ದರಿಂದಲೇ ಇವರನ್ನು ಎಲ್ಲಾ ಪಕ್ಷದವರೂ ವಿಶ್ವಾಸದಿಂದ ಕಾಣುತ್ತಿದ್ದರು. ಆ ವಿಶ್ವಾಸವನ್ನು ಇವರು ಎಂದೂ ದುರುಪಯೋಗ ಮಾಡಿಕೊಂಡವರಲ್ಲ. ಜಿ. ನಾರಾಯಣ ಅವರು ಸಾಹಿತಿಯಲ್ಲ, ಜಾನಪದ ತಜ್ಞರಲ್ಲ, ಆದರೆ ಅವೆಲ್ಲವನ್ನು ನಡೆಸಬಲ್ಲ ಸಂಘಟನಾಚತುರರು, ಅಪ್ರತಿಮ ಕನ್ನಡ ನಿಷ್ಠೆಯುಳ್ಳವರು. ಹಾಗಾಗಿಯೇ 1969ರಲ್ಲಿ ಕನ್ನಡಿಗರ ಸ್ವಾಯತ್ತ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಒಂಭತ್ತು ವರ್ಷಗಳ ಕಾಲ ನ ಭೂತೋ ನ ಭವಿಷ್ಯತಿ ಎನ್ನುವಂತೆ ತಮ್ಮ ಕ್ರಿಯಾಶೀಲತೆ, ದೂರದರ್ಶಿತ್ವ ಮತ್ತು ವೈಚಾರಿಕ ತಿಳಿವಳಿಕೆಯಿಂದ ಪರಿಷತ್ತಿಗೆ ಹೊಸದೊಂದು ರೂಪವನ್ನು ತಂದುಕೊಟ್ಟು ಪರಿಷತ್ತಿನ ಸುವರ್ಣಯುಗ ಎನ್ನುವಂತೆ ಮಾಡಿದರು. ಆರ್ಥಿಕವಾಗಿ ಸದೃಢಗೊಳಿಸಿದರು. ತ್ರೈವಾರ್ಷಿಕ, ಪಂಚ ವಾರ್ಷಿಕ ಯೋಜನೆಗಳ ಮೂಲಕ ಪರಿಷತ್ತನ್ನು ಅಭಿವೃದ್ಧಿಪಡಿಸಿದರು. ಇವರ ಅವಧಿಯಲ್ಲಿ ಪ್ರಾಚೀನ ಶಾಸ್ತ್ರಗ್ರಂಥಗಳ ಅನುವಾದ ಮಾಡಿಸಿ ಓದುಗರಿಗೆ ಸುಲಭಗೊಳಿಸಿದರು. ಕುವೆಂಪುರವರ ನಾಡಗೀತೆಯನ್ನು ಪರಿಷ್ಕರಣೆ ಮಾಡಿಸಿದರು, ಸುವರ್ಣ ಭವನ ಕಟ್ಟಡವನ್ನು ನಿರ್ಮಿಸಿದರು. 1970ರಲ್ಲಿ 47ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ದೇ. ಜವರೇಗೌಡರ ಅಧ್ಯಕ್ಷತೆಯಲ್ಲಿ ಬೆಂಗಳೂರಿನ ಕೋಟೆ ಮೈದಾನದಲ್ಲಿ ಅದ್ದೂರಿಯಾಗಿ ನಡೆಸಿದರು. ವಿಚಾರ ಸಂಕಿರಣಗಳು ಜನಮನ ಸೆಳೆಯುವಂತೆ ಮಾಡಿದರು. ಈ ಉಪನ್ಯಾಸಗಳನ್ನು ಎಂ.ವಿ. ಸೀತಾರಾಮಯ್ಯ ಅವರು ಚಿನ್ನದ ಬೆಳಕು ಶೀರ್ಷಿಕೆಯಲ್ಲಿ ವಿಶೇಷ ಸಂಚಿಕೆಯನ್ನು ರೂಪಿಸಿಕೊಟ್ಟರು. ಅದು ಪ್ರಕಟವಾಗಿ ಆಕರ ಗ್ರಂಥವಾಯಿತು. 1975ನ್ನು ಯುನೆಸ್ಕೋ ಮಹಿಳಾ ವರ್ಷವೆಂದು ಘೋಷಿಸಿದಾಗ ಇವರು ಪರಿಷತ್ತಿನಲ್ಲಿ ಅದರಂಗವಾಗಿ ಗೋಷ್ಠಿಗಳನ್ನು ನಡೆಸಿದರು. ಸಮ್ಮೇಳನಾಧ್ಯಕ್ಷರ ಭಾಷಣಗಳನ್ನು 3 ಸಂಪುಟಗಳಲ್ಲಿ ಪ್ರಕಟಿಸಿದರು. ವೆಬ್‌ಸೈಟ್ ಪ್ರಾರಂಭ ಮಾಡಿದರು. ಹಳ್ಳಿ ಹಳ್ಳಿಗಳಲ್ಲಿ ಪುಸ್ತಕ ಪ್ರದರ್ಶನ, ಶಾಲಾ ಕಾಲೇಜುಗಳಲ್ಲಿ ಸಾಹಿತ್ಯಿಕ ಸ್ಪರ್ಧೆಗಳನ್ನು ನಡೆಸಿದರು. 4 ಸಾಹಿತ್ಯ ಸಮ್ಮೇಳನಗಳನ್ನು ಅಚ್ಚುಕಟ್ಟಾಗಿ ನಡೆಸಿದರು. 19 ಜಿಲ್ಲಾ ಸಮ್ಮೇಳನ, 3 ಹೊರನಾಡು ಸಮ್ಮೇಳನಗಳನ್ನು ನಡೆಸಿದರು. ಕನ್ನಡ ಚಿಂತಕರಾಗಿ ಅನನ್ಯ ಸೇವೆ ಸಲ್ಲಿಸಿದರು. 1987ರಲ್ಲಿ ಕರ್ನಾಟಕ ಮಾಧ್ಯಮ ಅಕಾಡೆಮಿಯ ಅಧ್ಯಕ್ಷರಾಗಿ, 1992ರಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಸ್ಮರಣೀಯವಾದ ಸೇವೆಯನ್ನು ಸಲ್ಲಿಸಿದ್ದಾರೆ. ಹೀಗೆ ತಾವರೆಯಂತೆ ಕೆಸರು ನೀರನ್ನು ಅಂಟಿಸಿಕೊಳ್ಳದೆ ಅಭಿವೃದ್ಧಿ ಕಾರ್ಯಗಳನ್ನು ಮಾಡಿ ಹೆಸರು ಪಡೆದರೆ ಹೊರತು ಆಪಾದನೆ, ವಿವಾದಗಳಿಗೆ ಸಿಲುಕಲಿಲ್ಲ. ಸಾಹಿತ್ಯ ಮತ್ತು ಸಾಂಸ್ಕೃತಿಕ ವಲಯದಲ್ಲಿ ಹೆಚ್ಚು ತೊಡಗಿಸಿಕೊಂಡಿದ್ದರಿಂದ ಇವರಿಗೆ ಮಹಾನ್ ಸಾಹಿತಿಗಳು ಸಮೀಪವಾದರು. ಇವರ ಆಕರ್ಷಕ ವ್ಯಕ್ತಿತ್ವ ಎಲ್ಲರನ್ನು ತಮ್ಮೆಡೆ ಸೆಳೆಯುವಂತಿತ್ತು. ಕರ್ನಾಟಕ ಏಕೀಕರಣ ಚಳುವಳಿ, ಗೋಕಾಕ ಚಳುವಳಿಗಳಲ್ಲಿ ಪ್ರಮುಖ ಪಾತ್ರ ವಹಿಸಿದ ಜಿ. ನಾರಾಯಣರಿಗೆ ಕರ್ನಾಟಕ ಸರ್ಕಾರ ಕರ್ನಾಟಕ ಏಕೀರಣ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಹಂಪಿ ವಿಶ್ವವಿದ್ಯಾಲಯ ನಾಡೋಜ ಪ್ರಶಸ್ತಿಯನ್ನು ನೀಡಿ ಗೌರವಿಸಿತು. ಅಕ್ಷರವ ನೀವ್ ಕಲಿಯಿರಿ, ಮಲೇರಿಯಾ ಹಾವಳಿ, ಕಬ್ಬಿನ ಕಥಾಂತರ, ರಾಷ್ಟ್ರೀಯ ಪದಗಳು, ಹೆಚ್ಚು ಬೆಳೆಯನ್ನು ಬೆಳೆಯಿರಿ ಮುಂತಾದ ಕೃತಿಗಳನ್ನು ಬರೆದು ಲೇಖಕರಾಗಿಯೂ ಛಾಪು ಮೂಡಿಸಿದರು.

ಬಿ.ಎಂ.ಶ್ರೀ ಪ್ರತಿಷ್ಠಾನದ ಗೌರವ ಅಧ್ಯಕ್ಷರಾಗಿ, ಸಾಹಿತ್ಯ ಸಂವರ್ಧಕ ಟ್ರಸ್ಟ್, ಜಾನಪದ ಲೋಕ, ಉದಯಭಾನು ಕಲಾಸಂಘದ ಗೌರವ ಸದಸ್ಯರಾಗಿ, ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರಾಗಿ ಆ ಸಂಸ್ಥೆಗಳು ಬಹುಮುಖ ಏಳ್ಗೆಯನ್ನು ಪಡೆಯಲು ಶ್ರಮಿಸಿದರು. ಕರ್ನಾಟಕ ಲೇಖಕಿಯರ ಸಂಘ, ಶಾರದ ವಿದ್ಯಾಪೀಠ ಮತ್ತು ಶಶಿ ಕಲಾವಿದರು ಇವೇ ಮೊದಲಾದ ಸಂಸ್ಥೆಗಳ ಹುಟ್ಟಿಗೆ ಕಾರಣರಾದರು.

ಜಾನಪದ ತಜ್ಞ ಪ್ರಶಸ್ತಿ, ನಾಡೋಜ ಪ್ರಶಸ್ತಿ, ಉದಯಭಾನು ವಿದ್ಯಾರತ್ನ ಪ್ರಶಸ್ತಿ, ಕರ್ನಾಟಕ ಪತ್ರಿಕಾ ಅಕಾಡೆಮಿ ಪ್ರಶಸ್ತಿಗಳನ್ನು ತಮ್ಮ ಮುಡಿಗೇರಿಸಿಕೊಂಡು ಅವುಗಳ ಬಾರಕ್ಕೆ ಬೀಗದೆ ಗಾಂಭೀರ್ಯವನ್ನು ಕಾಪಾಡಿಕೊಂಡು ಘನತೆಯನ್ನು ಮೆರೆದರು. ಒಡಹುಟ್ಟಿದ ಶ್ರೀ ಪಾಪಣ್ಣ, ಶ್ರೀಮತಿ ಮಾಯಮ್ಮ, ಶ್ರೀಮತಿ ಜವನಮ್ಮ, ಶ್ರೀಮತಿ ಗೌರಮ್ಮ, ಶ್ರೀ ಕೆ. ರಾಮಣ್ಣ ಇವರೆಲ್ಲರಿಗೂ ಊರಿಗೂ ಬೇಕಾದವರಾಗಿ ಜನ್ಮಭೂಮಿಗೆ ಹೆಸರು ತಂದವರು. ಧರ್ಮಪತ್ನಿ ಶ್ರೀಮತಿ ಯಶೋಧಮ್ಮ, ಮಕ್ಕಳಾದ ಶ್ರೀ ಎನ್. ರಾಘವೇಂದ್ರ, ಎನ್.ಸುಜಾತ, ಎನ್.ಜಗದೀಶ, ಎನ್.ಗೋಪಾಲಕೃಷ್ಣರೊಡನೆ ಆದರ್ಶ ಜೀವನ ಸಾಗಿಸಿದ ಜಿ. ನಾರಾಯಣ ಅವರು ದಿನಾಂಕ 20.11.2011ರಂದು ಜನಮಾನಸ ಮತ್ತು ಸರ್ಕಾರಿ ಗೌರವಗಳೊಂದಿಗೆ ಇಹಲೋಕವನ್ನು ತ್ಯಜಿಸಿದರು. ಆದರೂ ಅವರ ವಿಚಾರಧಾರೆ, ಕನ್ನಡ ಪ್ರೇಮ, ಆದರ್ಶಪ್ರಾಯ ಬದುಕು ಇಂದಿಗೂ ನಮ್ಮೊಡನೆ ಇದೆ ಎಂಬುದು ಸತ್ಯ. ಇಂತಹ ಮಹಾನ್ ಚಿಂತಕರನ್ನು ಸ್ಮರಿಸುವ ನಿಟ್ಟಿನಲ್ಲಿ ನಾಡಿನ ಹಿರಿಯ ಸಾಹಿತಿಗಳು, ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರೂ ಆದ ನಾಡೋಜ ಡಾ. ಹಂಪನಾ ಅವರ ಗೌರವ ಅಧ್ಯಕ್ಷತೆ, ಜಿ. ನಾರಾಯಣ ಅವರ ಸಕ್ರಿಯ ಒಡನಾಡಿ ಶ್ರೀ ಎಂ. ನರಸಿಂಹ ಅವರ ಅಧ್ಯಕ್ಷತೆಯಲ್ಲಿ ಡಾ. ಜಿ. ನಾರಾಯಣ ಶತಮಾನೋತ್ಸವ ಆಚರಣಾ ಸಮಿತಿಯನ್ನು ರಚಿಸಿ ವಿಭಿನ್ನ ನೆಲೆಗಳಲ್ಲಿ ಆಚರಿಸಲು ಮುಂದಾಗಿ ಮಂಡ್ಯ ಜಿಲ್ಲೆಯಲ್ಲಿ ದಿನಾಂಕ 30-10-2022ರಂದು ಉದ್ಘಾಟನೆ ಮಾಡಲಾಗಿದೆ. ವರ್ಷವಿಡಿ ಅವರು ಸೇವೆ ಸಲ್ಲಿಸಿದ ಸಂಸ್ಥೆಗಳ ಸಹಕಾರದೊಂದಿಗೆ ಕಾರ್ಯಕ್ರಮ ರೂಪಿಸಲು ಯೋಜನೆ ಮಾಡಿರುವುದು ಹರ್ಷದಾಯಕವಾಗಿದೆ.

❑

ಡಿಪ್ಲೋಮೊ ಇನ್ ಇ-ಮ್ಯಾನೇಜ್‌ಮೆಂಟ್ ಮತ್ತು ಉದ್ಯೋಗಾಧಾರಿತ ಕೌಶಲ್ಯ ತರಬೇತಿ ಪದವಿ ಪ್ರದಾನ ಸಮಾರಂಭದ ಉದ್ಘಾಟನೆ ಮತ್ತು ಪ್ರಮಾಣಪತ್ರ ಪಡೆದ ವಿದ್ಯಾರ್ಥಿಗಳ ಸಮೂಹ. ಚಿತ್ರದಲ್ಲಿ ಡಾ. ಸಿ. ಸೋಮಶೇಖರ್, ಡಾ. ಟಿ.ವಿ. ರಾಜು, ಡಾ. ಕೆ. ಶೇಷಮೂರ್ತಿ, ಎಂ. ನರಸಿಂಹ ಹಾಗೂ ವಿದ್ಯಾರ್ಥಿ ಸಮೂಹ. ಇದೇ ಸಂದರ್ಭದಲ್ಲಿ ನಾಡೋಜ ಪದವಿ ಪುರಸ್ಕೃತರಾದ ಡಾ. ಜಿ. ಕೃಷ್ಣಪ್ಪ ಅವರನ್ನು ಸನ್ಮಾನಿಸಲಾಯಿತು.

2022ನೇ ಸಾಲಿನ ನೃತ್ಯ ಮತ್ತು ನಾಟಕೋತ್ಸವ ಸಾಂಸ್ಕೃತಿಕ ಸಂಭ್ರಮ

ಉದಯಸೌರಭ
UDAYASOURABHA

ಮುದ್ರಿತ ಪುಸ್ತಕ-ಅಂಚೆ

ಇವರಿಂದ
ಗೌರವ ಕಾರ್ಯದರ್ಶಿ
ಉದಯಭಾನು ಕಲಾಸಂಘ (ನೋಂ.)
ಗವಿಪುರ ಸಾಲು ಛತ್ರಗಳ ಎದುರು
ರಾಮಕೃಷ್ಣ ಮಠ ಬಡಾವಣೆ
ಕೆಂಪೇಗೌಡನಗರ
ಬೆಂಗಳೂರು-560 019
ದೂರವಾಣಿ : 080-26609343
ಟೆಲಿಫ್ಯಾಕ್ಸ್ : 080-26601831

From
Hon.Secretary
Udayabhanu Kalasangha (R.)
Ramakrishna Math Layout
Opp. Gavipura Choultry Block
Kempegowdanagar
Bengaluru - 560 019
Ph.: 080-26609343
Telefax : 080-26601831

E-mail:udayabhanu_1965@yahoo.co.in Website : www.udayabhanu.org

Printed by : M. Narasimha, Published by : M. Narasimha, Owned by : M. Narasimha on behalf of Udayabhanu Kalasangha (R), Printed at : Keerthi Printers, No.3658, 'Omkara', 2nd 'B' Main, 2nd 'D' Cross, 1st Phase Girinagar, Bengaluru - 560 085, Published at : Udayabhanu Kalasangha (R), Opposite Gavipura Choultry, Ramakrishna Mutt Layout, Kempegowdanagar, Bengaluru - 560 019. Editor : Dr. Shantharaju.